ಚೆನ್ನೈನಲ್ಲಿ ಕುಳಿತವನು ಕಾಳಜಿ ತೋರಿಸುವವನಂತೆ ಇಲ್ಲಿಗೆ ಆಗೊಮ್ಮೆ ಈಗೊಮ್ಮೆ ಬಂದಿದ್ದು ಹೋಗುತ್ತಾನೆನ್ನುವುದೇನೋ ನಿಜ. ಆದರೆ ತನ್ನ ಮಗಳ ಮೇಲೆ ಅಣ್ಣನಿಗಿರುವ ಕಾಳಜಿ ಮಾತು ನಿಂತ ತನ್ನಪ್ಪನ ಮೇಲೂ ಇದ್ದಿದ್ದರೆ ಆಯಿಯೊಬ್ಬಳನ್ನೇ ಚೆನ್ನೈಗೆ ಕರೆಸಿಕೊಳ್ಳುವ ಮಾತೆತ್ತುತ್ತಿದ್ದನೇ? ಗಂಡ ಹೆಂಡತಿ ದುಡಿಯುವ ಮಷೀನುಗಳಾಗಿ ಮಾರ್ಪಟ್ಟ ಮೇಲೆ ತಮ್ಮ ಮಗಳನ್ನು ನೋಡಿಕೊಳ್ಳಲು ಆಯಿಯ ನೆನಪಾಗಿದ್ದಿರಬಹುದಾದರೂ ಚೆನ್ನೈನ ಎರಡತಂಸ್ತಿನ ಮನೆಯಲ್ಲಿ ಅಪ್ಪನಿಗಾಗಿ ಒಂದು ಮೂಲೆಯೂ ಖಾಲಿ ಇಲ್ಲವೇ ಹಾಗಿದ್ದರೆ ಎಂದು ನನ್ನೊಳಗೇ ಹಳಹಳಿಸಿಕೊಂಡೆ.

ಆಯಿ ಹಾಸಿಗೆ ಹಾಸಿ ಕಾಲು ಒಡಕಿಗೆ ಮುರುಗಲು ತುಪ್ಪ ಸವರಿಕೊಳ್ಳುತ್ತ ಹಾವಿನ ಚರ್ಮದಂತೆ ಬಿರುಕಲಾದ ಕಾಲು ಕೈಗೂ ಅದನ್ನೇ ಸವರಿಕೊಳ್ಳುತ್ತ, 'ದಕ್ಷಾ, ನಮ್ಮ ನಮ್ಮ ಕಷ್ಟಕ್ಕೆ ಮನೆ ಮಂದಿಯಾಗದೇ ಪ್ರತೀ ಹೆಜ್ಜೆಗೂ ನಗುವ ಊರವರು ಆಗುತ್ತಾರೆಂದುಕೊಂಡರೆ ನಾವು ಮೂರ್ಖರಲ್ಲವೇ? ನೀನೂ ಆ ಹುಬ್ಬಳ್ಳಿಯಲ್ಲಿದ್ದು ನಾಲ್ಕು ಕಾಸು ಸಂಪಾದಿಸಿ ಬಾಡಿಗೆ, ಮೆಸ್ಸಿನ ಊಟ ಅಂತ ಖರ್ಚು ಮಾಡುವುದರ ಬದಲು ಮನೆಯಲ್ಲೇ ಇದ್ದುಕೊಂಡು ಕಿಬ್ಬಳ್ಳಿಯ ಸೊಸೈಟಿಯಲ್ಲಿಯೇ ಯಾಕೆ ನೌಕರಿಗೆ ಸೇರಿಕೊಳ್ಳಬಾರದು? ಎರಡೂ ಹೊತ್ತು ಹಾಲು ಕೊಡಲು ಕಿಬ್ಬಳ್ಳಿಗೆ ಹೋಗಿ ಬರುವ ಚಿಕ್ಕಯ್ಯ ನಿನ್ನನ್ನು ಕರೆದು ಕಳಿಸಿ ಮಾಡಲು ತಯಾರಿದ್ದಾನೆ. ನೀನು ಮನೆಯಲ್ಲಿರುತ್ತೀಯಾ ಅಂತಾದರೆ ನಿನ್ನಪ್ಪನನ್ನು ಒಬ್ಬಂಟಿ ಮಾಡಿ ಹೋದ ಭಾವ ನನಗೂ ಸ್ವಲ್ಪ ಕಡಿಮೆಯಾಗುವುದಲ್ಲದೆ, ನೀನಿಲ್ಲೇ ಓಡಾಡಿಕೊಂಡಿದ್ದರೆ, ಸೊಸೈಟಿಗೆ ಬರುವ ನಾಲ್ಕು ಜನರ ಕಣ್ಣಿಗೆ ನೀನು ಬೀಳುತ್ತಿದ್ದರೆ ಬಹಳ ಒಳ್ಳೆಯದು. ಗನಾ ಜಾಗವಿದ್ದರೆ ಮುದ್ದಾಂ ತಿಳಿಸುತ್ತಾರೆ' ಎಂದಳು. ಆಯಿ ತನ್ನ ಕಾಲಿಗೆ ತುಪ್ಪ ಸವರುತ್ತಿದ್ದಳೋ ಅಥವಾ ನನಗೋ ಎಂಬ ಸಂದೇಹ ನನಗೆ!

ನನಗೇನೋ ಮದುವೆಯ ಯೋಗ ಬಂದಿರಬಹುದೆಂದೆಲ್ಲಾ ಲೆಕ್ಕ ಹಾಕುತ್ತ ನಾನಿದ್ದರೆ ಮಾತು ಮಾತಿಗೂ ವಿನೋದನ ಸುದ್ದಿ ತೆಗೆದು ಹಂಗಿಸುವವರ ನಡುವೆ ಪ್ರತಿದಿನ ಹೊಂದಿಕೊಂಡು ಬದುಕಲು ಆಹ್ವಾನಿಸುತ್ತಿದ್ದಾಳಲ್ಲಾ ಆಯಿ! ಅಣ್ಣನಿಗೇನೋ ಸಹಾಯ ಮಾಡಲು ಹೊರಟ ಆಯಿ ನನ್ನ ರೆಕ್ಕೆಯನ್ನು ಕತ್ತರಿಸುತ್ತಿದ್ದಾಳೆಯೆನಿಸಿ ನಾನು ತೊಳಲಾಟಕ್ಕೆ ಬಿದ್ದೆ.

'ನಿನ್ನ ಚಿಕ್ಕಯ್ಯ, ಹೆರ್ಪನವರೇ ನಿನ್ನಣ್ಣನಿಗಾಗಿ ನನ್ನನ್ನು ಚೆನ್ನೈಗೆ ಕಳಿಸಲು ತಯಾರಿರುವಾಗ ಒಡಹುಟ್ಟಿದವಳಾದ ನೀನು ಆಗದು ಎಂದರೆ ನಿನ್ನಣ್ಣನಿಗೆ ಹೇಗಾಗಬಹುದು ಅಂತಲೂ ಸ್ವಲ್ಪ ಯೋಚಿಸು ದಕ್ಷಾ. ನಿನ್ನಣ್ಣ ನಾಳೆ ಬೆಳಿಗ್ಗೆ ಬಂದವನು ಮಧ್ಯಾಹ್ನ ಊಟ ಮುಗಿಸಿ ಹಾಗೆಯೇ ಹೊರಟುಬಿಡುವ ಎಂದಿದ್ದಾನೆ. ನನಗೂ ನಿನ್ನಣ್ಣನೊಂದಿಗೆ ಹೊರಡುವ ಹೊರತಾಗಿ ಬೇರೆ ದಾರಿ ಯಾವುದೂ ಕಾಣಿಸುತ್ತಿಲ್ಲ' ಎಂದು ತಾನು ನಾಳೆ ಚೆನ್ನೈಗೆ ಹೊರಡುತ್ತಿರುವುದು ಖಾತ್ರಿ ಎಂದು ಸುತ್ತಿಬಳಸಿ ಹೇಳಿ ಮುಗಿಸಿದಳು.

ಅಷ್ಟೊತ್ತಿಗಾಗಲೇ ಕೋಳಿ ನಿದ್ರೆ ಮಾಡೆದ್ದ ಅಪ್ಪ ಖವಖವ ಕೆಮ್ಮತೊಡಗಿದ. ಅಪ್ಪ ಕೆಮ್ಮುತ್ತಿದ್ದಾನೆ ಎಂದರೆ ಅವನಿಗೇನೋ ಬೇಕಿದೆ ಎಂದರ್ಥ. ಅಪ್ಪನ ಮಾತು ನಿಂತಮೇಲೆ ಅವನ ಗೊಗ್ಗರು ಕೆಮ್ಮಿನ ಸಪ್ಪಳವೂ ಕೀರಲಾಗಿ ಬದಲಾಗಿತ್ತು. ನಾನು ಹುಬ್ಬಳ್ಳಿಯಲ್ಲಿ ನೌಕರಿಗೆ ಹಿಡಿದ ವರ್ಷದಲ್ಲಿ ನಡೆದ ಸಮಾರಾಧನೆಯ ದಿನ ಅಪ್ಪನ ತುತ್ತಿನಲ್ಲಿ ಬತ್ತದ ತೌಡು ಸಿಕ್ಕ ನೆಪವಷ್ಟೇ. ಗಂಟಲನ್ನು ಅದು ಗೀರಿಕೊಂಡು ಹೋಯಿತೋ ಏನೋ ಗೊತ್ತಿಲ್ಲ. ಅಪ್ಪನ ಮಾತಂತೂ ನಿಂತುಹೋಗಿತ್ತು. ಅಂದಿನಿಂದ ಆಯಿಯನ್ನು ಕರೆಯಬೇಕೆಂದರೆ ಅಪ್ಪ ಕೆಮ್ಮುತ್ತಿದ್ದ.

ಹೇಳುವುದು ಹೇಳಾಗಿದೆ ಎಂಬರ್ಥದ ಮುಖ ಮಾಡಿಕೊಂಡ ಆಯಿ 'ಬರುತ್ತಿದ್ದೇನೆ...' ಎಂದು ಅಪ್ಪನಿಗೆ ಆವಾಜು ಕೊಡುತ್ತ ಹೊರಹೋದಳು.

ಮೊದಲೆಲ್ಲಾ ನನ್ನ ಮದುವೆ ಎಂದು ತಲೆಕೆಡಿಸಿಕೊಂಡಿದ್ದವರೆಲ್ಲಾ ಈಗ 'ಹಣೆಯಲ್ಲಿ ಬರೆದಂತೆ